**MANGALORE UNIVERSITY**

**DEPARTMENT OF POSTGRADUATE STUDIES AND RESEARCH IN PHYSICS**

**CBCS COURSE STRUCTURE**

| Semester | Theory (Hard Core)/Sof t core | Credits | Practicas Soft/Had | Credits | Theory (Elective) Soft/hard | Credits | Theory (Open Elective) | Credits | Projects Hard/soft | Credits | Total credits |
|---|---|---|---|---|---|---|---|---|---|---|---|
| I | 4 H | 4x4=16 | 2 S | 6 | - | - | - | - | - | - | 22 |
| II | 4 H | 4x4=16 | 2 S | 6 | - | - | 1 | 3 | - | - | 25 |
| III | 2 H | 2x4=8 | 2 S | 6 | 2 S | 2x4=8 | 1 | 3 | - | - | 25 |
| IV | 2 H | 2x4=8 | - | - | 2 S | 2x4=8 | - | - | 1 H | 4 | 20 |

Total credit from all the four semesters (I, II, III and IV): 22+25+25+20 = 92

**Details of course and credits for four semesters:**

| Hard core credits with % | Soft core credits with % | Total credits hard+ soft without open elective | Open elective credits | Total credits hard +soft+ open elective |
|---|---|---|---|---|
| 52 (60.47) | 34 (39.53) | 86 | 6 | 92 |

**NOTE:**

FIRST SEMESTER: The first semester consists of four theory courses which are hard core (4 hours per week for each paper and shall carry 4 credits for each course) and two practicals (soft core 6 hours per week for each practical course and each practical course carries 3

credits). The duration of the lab is 3 hours. The students have to come twice a week for each of the practical course.

SECOND SEMESTER: The second semester consists of four theory courses which are hard core (4 hours per week for each course and shall carry 4 credits for each of the courses) and two practical (soft core 6 hours per week for each practical course and each practical course shall carry 3 credits). The duration of the lab is 3 hours. The students have to come twice a week for each of the practical course. In addition, there shall be an open elective course to be opted by the student from other departments. The open elective course is a soft core course (3 hours per week and shall carry 3 credits).

THIRD SEMESTER: The third semester consists of four theory courses, two general theory courses and two elective courses. The elective courses are offered in each of the three specializations, condensed matter physics, electronics and nuclear physics. The two general papers are hard core (4 hours per week and shall carry 4 credits). The two elective courses offered in each of the three specializations are soft core courses (4 hours per week and shall carry 4 credits). The two practical courses for each of the above mentioned specialization are soft core courses (6 hours per week and shall carry 3 credits for each of the practical course). The duration of the lab is 3 hours for each practical. The students have to come twice a week for each of the practical courses. In addition there is an open elective course to be opted by the student from other departments. The open elective is a soft core course (3 hours per week and shall carry 3 credits).

FOURTH SEMESTER: The fourth semester consists of four theory courses, two general theory courses and two elective courses. The elective courses are offered in each of the three specializations, condensed matter physics, electronics and nuclear physics. The two general courses are hard core (4 hours per week and shall carry 4 credits). The two elective courses offered in each of the three specializations are soft core courses (4 hours per week and shall carry 4 credits). There shall be a compulsory project work which has to be under taken by all the students of the fourth semester. The project work is a hard core having 8 hours per week with 4 credits.

## MANGALORE UNIVERSITY

### M Sc (Physics) Scheme of Examination, Marks and Credits

| SEMESTER | Theory/practicals | Exam. hours | Marks end Semester + Internal assessment | Credits | Total |
|---|---|---|---|---|---|
| I Semester | 4 Theory courses (hard core) | 3 hrs each | 70 + 30* each | 4 x 4 = 16 | 400 |
| | 2 Practicals (hard core) | 4 hrs each | 70 + 30* each | 2 x 3 = 6 | 200 |
| II Semester | 4 Theory papers(hard core) | 3 hrs each | 70 + 30* each | 4 x 4 = 16 | 400 |
| | Two practicals (hard core)<br>One open elective (theory) | 4 hrs each<br>3 hrs | 70 + 30* each<br>70 + 30* each | 2 x 3= 6<br>1x3 =3 | 200<br>100 |
| | | | | | |
| III Semester | 4 Theory courses<br>i) Two hard core ( 4 credits)<br>ii)Two soft core ( 3 credits) | 3 hrs each | 70 + 30* each | 2x 4 = 8<br>2 x 3 = 6 | 400 |
| | Two practicals (soft core)<br>One open elective (theory) | 4 hrs each<br>3 hrs | 70 + 30* each<br>70 + 30* each | 2 x 3 = 6<br>1 x3=3 | 200<br>100 |
| IV Semester | 4 Theory courses<br>i) Two hard core ( 4 credits)<br>ii)Two soft core ( 3 credits) | 3 hrs each | 70 + 30* each | 2 x 4 = 8<br>2 x 3= 6 | 400 |
| | Project (hard core) | 8 hrs | 70+30 viva | 1 x 4 = 4 | 100 |
| | | | Grand Total | 92 | 2500 |

*Internal Assessment

**NOTE:**

**BASIS FOR INTERNAL ASSESSMENT:**

Internal assessment marks in theory courses shall be based on two tests in each theory course and the total internal assessment marks for each subject is 30. Practical internal assessment marks is based on viva voce and practical records in the semesters and carries 30 marks for each practical course.

**Project Report:** There shall be a project in the fourth semester for all the three specializations. The project report shall be in the form of a project report/dissertation and carries 100 marks (dissertation (70) + viva-voce (30)) and has 4 credits. A dissertation/project report shall be evaluated by two examiners, one external and one internal from out of the panel of examiners prepared by the B.O.S, and approved by the University. There is viva-voce examination, conducted by the examiners.

MANGALORE UNIVERSITY

**M Sc in PHYSICS: SEMESTER SCHEME**

(Effective from the Academic year 2016- 2017)

## COURSE PATTERN AND SCHEME OF EXAMINATION

| SEMESTER | Description of the Courses | Teaching Hrs/ week | Credit Hard(H)/Soft(S)/ Open elective(OE) | Max Marks: Exam + IA = Total |
|---|---|---|---|---|
| **I SEMESTER** | | | | |
| PHH 401 | Methods of Mathematical Physics - I | 4 | 4 H | 70 + 30 |
| PHH 402 | Quantum Mechanics I | 4 | 4 H | 70 + 30 |
| PHH 403 | Classical Mechanics | 4 | 4 H | 70 + 30 |
| PHH 404 | Electrodynamics | 4 | 4 H | 70 + 30 |
| PHP 405 | Physics Practicals I (General) | 6 | 3 S | 70 + 30 |
| PHP 406 | Physics Practicals II (Electronics) | 6 | 3 S | 70 + 30 |
| **II SEMESTER** | | | | |
| PHH 451 | Mathematical Physics II | 4 | 4 H | 70 + 30 |
| PHH 452 | Quantum Mechanics II | 4 | 4 H | 70 + 30 |
| PHH 453 | Nuclear and Radiation Physics | 4 | 4 H | 70 + 30 |
| PHH 454 | Condensed Matter Physics and Electronics | 4 | 4 H | 70 + 30 |
| PHE 455 | Energy studies | 3 | 3S (OE) | 70 + 30 |
| PHP 456 | Physics Practicals III (General) | 6 | 3 S | 70 + 30 |
| PHP 457 | Physics Practicals IV (General) | 6 | 3 S | 70 + 30 |

| | | | | |
|---|---|---|---|---|
| **III SEMESTER** | | | | |
| PHH 501 | Atomic and Molecular Physics | 4 | 4 H | 70 + 30 |
| PHH 502 | Thermodynamics and Statistical Physics | 4 | 4 H | 70 + 30 |
| PHS 503 | Condensed Matter Physics I | 4 | 4 S | 70 + 30 |
| PHS 504 | Electronics I | 4 | 4 S | 70 + 30 |
| PHS 505 | Nuclear Physics I | 4 | 4 S | 70 + 30 |
| PHS 506 | Condensed Matter Physics II | 4 | 4 S | 70 + 30 |
| PHS 507 | Electronics II | 4 | 4 S | 70 + 30 |
| PHS 508 | Nuclear Physics II | 4 | 4 S | 70 + 30 |
| PHE 509 | Radiation Sources and Hazards | 3 | 3 S (OE) | 70+30 |
| PHP 510 | Condensed Matter Physics - Practicals I | 6 | 3 S | 70 + 30 |
| PHP 511 | Electronics - Practicals I | 6 | 3 S | 70 + 30 |
| PHP 512 | Nuclear Physics – Practicals I | 6 | 3 S | 70 + 30 |
| PHP 513 | Condensed Matter Physics - Practicals II | 6 | 3 S | 70 + 30 |
| PHP 514 | Electronics - Practicals II | 6 | 3 S | 70 + 30 |
| PHP 515 | Nuclear Physics – Practicals II | 6 | 3 S | 70 + 30 |

| IV SEMESTER | | | | |
|---|---|---|---|---|
| PHH 551 | Lasers, Vacuum Techniques and Cryogenics | 4 | 4 H | 70 + 30 |
| PHH 552 | Astrophysics and Relativity | 4 | 4 H | 70 + 30 |
| PHS 553 | Condensed Matter Physics III | 4 | 4 S | 70 + 30 |
| PHS 554 | Electronics III | 4 | 4 S | 70 + 30 |
| PHS 555 | Nuclear Physics III | 4 | 4 S | 70 + 30 |
| PHS 556 | Condensed Matter Physics IV | 4 | 4 S | 70 + 30 |
| PHS 557 | Electronics IV | 4 | 4 S | 70 + 30 |
| PHS 558 | Nuclear Physics IV | 4 | 4 S | 70 + 30 |
| PHP 559 | Project work | 8 | 4 H | 70+30 |

**MANGALORE UNIVERSITY**
**DEPARTMENT OF PHYSICS**

Proceedings of the meeting of the Internal Members of PG Board of Studies in Physics held in the Department of Physics, Mangalore University, Mangalagangotri on 18.07.2016 at 11.30 am.

Chairman: Prof. K.B. Vijaya Kumar

Members present:
1. Prof. S.M. Dharmaprakash
2. Prof. Y Narayana
3. Prof. Gopalakrishna Naik, K,
4. Prof. Ganesh Sanjeev

Members not present: Prof. V Ravindrachary
Prof. K M Balakrishna

**Proceedings of the Meeting**:

The chairman welcomed the members of the Board for the special BOS meeting. The Board took up the following agenda for discussion and approval.

i) PG BOS prepared the scheme and the syllabi for the choice based credit system of two year (four semesters) M.Sc in Physics and Radiation Physics in the meeting held on 04-06-2016 and the same was submitted to the University. University placed it before Faculty of Science and Technology meeting held on 13th July 2016 at 10.30 am held at the New Senate Hall, Mangalore University. Faculty of Science and Technology suggested general guidelines to prepare the scheme and submit the modified scheme to the University at the earliest. Accordingly the meeting of the internal members of PG BOS in Physics was held on 18.07-2016 at 11.30 am. Internal members of PG BOS in Physics prepared the scheme for M.Sc programmes in Physics and Radiation Physics and approved it. The PG BOS also identified and prepared soft core and hard core syllabi. The changes incorporated in the syllabus have been intimated to all the members. The BOS also prepared the code for the papers according to the University guidelines received by e-mail from the Registrar evaluation office on 14/07/2016.

The meeting concluded with vote of thanks.

Prof. S.M. Dharmaprakash

Prof. Y. Narayana

Prof. K. Gopalakrishna Naik

Prof. Ganesh Sanjeev

(K.B.Vijaya Kumar)
Chairman PG BOS in Physics

MANGALORE UNIVERSITY

PROCEEDINGS OF THE FIRST REGULAR MEETING OF THE ACADEMIC COUNCIL FOR THE YEAR 2016-17 HELD ON 26-7-2016 AT THE NEW SENATE HALL, MANGALORE UNIVERSITY ADMINISTRATIVE BLOCK AT 11:00 AM

Honourable Vice Chancellor extended a welcome to all members, invitees and representatives pf the media to the meeting

AGENDA NO: ACC Gen Meet 1:7 (2016-17)

Subject: PhD Course Work Syllabus of Geography – Approval reg.

Resolution: Approved

AGENDA NO: ACC Gen Meet 1:8 (2016-17)

Subject: Mangalore University's 2 years (4 Semesters) Postgraduate Degree Programmes – the Regulations framed for Choice based credit system as per UGC - Reg.

Resolution: Regulations were approved. Practicals with 2 credits as recommended by the Faculty of Science and Technology in its meeting held on 13-7-2016 were approved. But, as seminar is part of internal assessment, recommendation to assign 1 credit for Seminar was shelved.

AGENDA NO: ACC Gen Meet 1:14 (2016-17)

Subject: Mangalore University MSc Applied Zoology and Applied Botany Departments to offer MSc Zoology and MSc Botany from the academic year 2016-17 – Reg.

Resolution: Approved. Chairpersons of the BOS were asked to give a press statement to this effect.

AGENDA NO: ACC Gen Meet 1:25 (2016-17)

Subject: Faculty of Education Programmes as per UGC Regulations for Choice based credit system Revised Syllabus -Approval reg.

Resolution: The PG Programmes' Syllabi under Faculty of Education were approved.

Registrar
Mangalore University
MangalaGangothri - 574199

AGENDA NO: ACC Gen Meet 1:26 (2016-17)

Subject: Faculty of Commerce Programmes as per UGC Regulations for Choice based credit system Revised Syllabus -Approval reg.

Resolution: The PG Programmes' Syllabi under Faculty of Commerce were approved.

AGENDA NO: ACC Gen Meet 1:29 (2016-17)

Subject: Faculty of Arts Programmes as per UGC Regulations for Choice based credit system Revised Syllabus -Approval reg.

Resolution: The PG Programmes' Syllabi under Faculty of Arts were approved. The Chairperson of BOS was asked to discuss the suggestion of a member of the Academic Council with regard to MSW Syllabus with the Dean of Arts and take necessary action.

AGENDA NO: ACC Gen Meet 1:30 (2016-17)

Subject: Faculty of Science and Technology Programmes as per UGC Regulations for Choice based credit system Revised Syllabus -Approval reg.

Resolution: The PG Programmes' Syllabi under Faculty of Science and Technology were approved.

Sd/- Sd/-

Registrar Vice Chancellor

This is a true transcript of excerpts of the above-mentioned meeting relating to Curriculum

Registrar

Registrar
Mangalore University
MangalaGangothri - 574199

# <u>ಮಂಗಳೂರು ವಿಶ್ವವಿದ್ಯಾನಿಲಯ</u>

ದಿನಾಂಕ 26.07.2016ರಂದು ಪೂರ್ವಾಹ್ನ ಗಂಟೆ 11:00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಹೊಸ ಸೆನೆಟ್ ಸಭಾಂಗಣದಲ್ಲಿ ನಡೆದ ಶೈಕ್ಷಣಿಕ ಮಂಡಳಿಯ 2016-17ನೇ ಸಾಲಿನ ಪ್ರಥಮ ಸಾಮಾನ್ಯ ಸಭೆಯ ನಡಾವಳಿಗಳು.

ಉಪಸ್ಥಿತ ಸದಸ್ಯರು:

ಅನುಪಸ್ಥಿತ ಸದಸ್ಯರು:

ಮಾನ್ಯ ಕುಲಪತಿಯವರು ಎಲ್ಲಾ ಸದಸ್ಯರನ್ನು, ಆಹ್ವಾನಿತರನ್ನು ಹಾಗೂ ಮಾಧ್ಯಮ ಪ್ರತಿನಿಧಿಗಳನ್ನು ಸಭೆಗೆ ಸ್ವಾಗತಿಸಿದರು.

ಪ್ರಾರಂಭಿಕ

I. ಡಾ. ಕೆ. ಎಂ. ಲೋಕೇಶ್, ಪ್ರಾಧ್ಯಾಪಕರು, ಸ್ನಾತಕೋತ್ತರ ಇತಿಹಾಸ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇವರು ಸರ್ಕಾರದ ಆದೇಶ ಸಂಖ್ಯೆ ಇಡಿ 80 ಯುಡಿಬಿ 2016 ದಿನಾಂಕ 20.06.2016ರಂತೆ ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವರಾಗಿ ನೇಮಕಗೊಂಡಿರುವ ವಿಚಾರವನ್ನು ಮಾನ್ಯ ಕುಲಪತಿಯವರು ಸಭೆಗೆ ತಿಳಿಸಿ ನೂತನ ಕುಲಸಚಿವರನ್ನು ಸಭೆಗೆ ಸ್ವಾಗತಿಸಿದರು.

II. ದಿನಾಂಕ 04.06.2016ರಿಂದ ಮಂಗಳೂರು ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿ ಹುದ್ದೆಯ ಪ್ರಭಾರವನ್ನು ವಹಿಸಿಕೊಂಡಿರುವ ಡಾ. ಶ್ರೀಪತಿ ಕಲ್ಲೂರಾಯ, ಪ್ರಾಧ್ಯಾಪಕರು, ಸ್ನಾತಕೋತ್ತರ ಅರ್ಥಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರನ್ನು ಮಾನ್ಯ ಕುಲಪತಿಯವರು ಸ್ವಾಗತಿಸಿದರು.

III. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ 30(1)(ix)ರ ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿಗೆ ಡೀನರ ನೆಲೆಯಲ್ಲಿ ಸದಸ್ಯರಾಗಿ ನಾಮನಿರ್ದೇಶನಗೊಂಡಿರುವ ಡಾ. ಪಿ. ಈಶ್ವರ ಭಟ್, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ ಹಾಗೂ ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇವರನ್ನು ಮಾನ್ಯ ಕುಲಪತಿಯವರು ಸ್ವಾಗತಿಸಿದರು.

IV. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ 30 (1)(V)ರ ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿಯ ಸದಸ್ಯರುಗಳಾಗಿ ನಾಮನಿರ್ದೇಶನಗೊಂಡಿರುವ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಾದ ಶ್ರೀ ಐವನ್ ಡಿ ಸೋಜ, ಲಿಲ್ಲಿ ಫಾತಿಮಾ ಲೇನ್, ಕಂಕನಾಡಿ ಅಂಚೆ, ಮಂಗಳೂರು - 575 002 ಮತ್ತು ಶ್ರೀ ಎಂ. ಪಿ. ಸುನಿಲ್ ಸುಬ್ರಮಣಿ, ಕಾಮಧೇನು, ವಿಜಯನಗರ, ಮಡಿಕೇರಿ - 571 201 ಇವರನ್ನು ಮಾನ್ಯ ಕುಲಪತಿಯವರು ಸ್ವಾಗತಿಸಿದರು.

V. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ 30(1)(vi)ರ ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿಗೆ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರ ಜೇಷ್ಠತೆ ಹಾಗೂ ಸರದಿಯ ಮೇರೆಗೆ ಮಾನ್ಯ ಕುಲಪತಿಯವರಿಂದ ನಾಮನಿರ್ದೇಶನಗೊಂಡಿರುವ

1. ಡಾ. ಪಿ. ವೆಂಕಟರಮಣ ಗೌಡ, ಪ್ರಾಂಶುಪಾಲರು, ಶ್ರೀ ಭುವನೇಂದ್ರ ಕಾಲೇಜು, ಕಾರ್ಕಳ - 574 104.

2. ಡಾ. ವರದರಾಜ ಸಿ. ಹೆಚ್., ಪ್ರಾಂಶುಪಾಲರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಬೆಟ್ಟಂಪಾಡಿ, ಪುತ್ತೂರು ತಾಲೂಕು - 574 259.

3. ಡಾ. ಟಿ. ಎ. ಸುಬ್ಬರಾವ್, ಪ್ರಾಂಶುಪಾಲರು, ಡಾ. ಎಂ. ವಿ. ಶೆಟ್ಟಿ ಕಾಲೇಜ್ ಆಫ್ ಸ್ಪೀಚ್ ಆ್ಯಂಡ್ ಹಿಯರಿಂಗ್, ವಿದ್ಯಾನಗರ, ಪಂಜಿಮೊಗರು, ಕೂಳೂರು, ಮಂಗಳೂರು - 575 013

ಇವರುಗಳನ್ನು ಶೈಕ್ಷಣಿಕ ಮಂಡಳಿ ಸಭೆಗೆ ಸ್ವಾಗತಿಸಲಾಯಿತು.

VI. 1. ದಿನಾಂಕ 30.10.2015 ರಿಂದ ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವರಾಗಿ ಕಾರ್ಯ ನಿರ್ವಹಿಸಿದ್ದ ಹಾಗೂ ದಿನಾಂಕ 21.06.2016ರಂದು ಕುಲಸಚಿವರ ಕರ್ತವ್ಯದಿಂದ ಬಿಡುಗಡೆಗೊಂಡ ಪ್ರೊ. ಟಿ. ಡಿ. ಕೆಂಪರಾಜು, ಇವರ ಸೇವೆಯನ್ನು ಕೃತಜ್ಞತಾಪೂರ್ವಕವಾಗಿ ದಾಖಲಿಸಲಾಯಿತು.

2. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ಅಧಿನಿಯಮ 2000ದ ಪ್ರಕರಣ 30(1) (vi)ರ ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರ ಜೇಷ್ಠತೆ ಹಾಗೂ ಸರದಿಯ ನೆಲೆಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿಗೆ ಮಾನ್ಯ ಕುಲಪತಿಯವರಿಂದ ನಾಮ ನಿರ್ದೇಶನಗೊಂಡು ಹಾಗೂ ಶೈಕ್ಷಣಿಕ ಮಂಡಳಿಯ ಸದಸ್ಯತ್ವದಿಂದ ಬಿಡುಗಡೆಗೊಂಡ ಈ ಕೆಳಗಿನ ಸದಸ್ಯರ ಸೇವೆಯನ್ನು ಕೃತಜ್ಞತಾಪೂರ್ವಕವಾಗಿ ದಾಖಲಿಸಲಾಯಿತು.

1. ಡಾ. ಟಿ. ಜಯಪ್ರಕಾಶ್ ರಾವ್, ಪ್ರಾಂಶುಪಾಲರು, ಎ. ಜೆ. ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಕೊಟ್ಟಾರ ಚೌಕಿ, ಮಂಗಳೂರು 575 006
2. ಡಾ. ನೆರಿ ಕಾರ್ನಲಿಯೋ, ಪ್ರಾಂಶುಪಾಲರು, ಮಿಲಾಗ್ರಿಸ್ ಕಾಲೇಜು, ಕಲ್ಯಾಣಪುರ - 576 114
3. ಡಾ. ಫರೀಟಾ ಎನ್. ಎಫ್. ವೇಗಸ್, ಪ್ರಾಂಶುಪಾಲರು, ಸೈಂಟ್ ಅಲೋಶಿಯಸ್ ಇನ್‌ಸ್ಟಿಟ್ಯೂಟ್ ಆಫ್ ಎಜ್ಯುಕೇಶನ್, ಮಂಗಳೂರು - 575 003.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ 30(1)(X)ರ ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿಗೆ ವಿದ್ಯಾರ್ಥಿ ಪ್ರತಿನಿಧಿಗಳ ನೆಲೆಯಲ್ಲಿ ಸದಸ್ಯರಾಗಿ ನಾಮನಿರ್ದೇಶನಗೊಂಡು ಹಾಗೂ ಶೈಕ್ಷಣಿಕ ಮಂಡಳಿಯ ಸದಸ್ಯತ್ವದಿಂದ ಬಿಡುಗಡೆಗೊಂಡ ಈ ಕೆಳಗಿನ ವಿದ್ಯಾರ್ಥಿಗಳ ಸೇವೆಯನ್ನು ಕೃತಜ್ಞತಾಪೂರ್ವಕವಾಗಿ ದಾಖಲಿಸಲಾಯಿತು.

1. ಕು. ಫಾತಿಮಾ ಶಿಬಿನ್ ಕುರಿಕಲ್, ತೃತೀಯ ಬಿ.ಬಿ.ಎಂ., ಶ್ರೀನಿವಾಸ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ಪಾಂಡೇಶ್ವರ, ಮಂಗಳೂರು - 575 001 (ವೃತ್ತಿಪರ ಮತ್ತು ಪದವಿ ಕೋರ್ಸು)
2. ರಾಘವೇಂದ್ರ, ತೃತೀಯ ಬಿ.ಕಾಂ., ಶ್ರೀಮತಿ ರುಕ್ಮಿಣಿ ಶೆಡ್ತಿ ಮೆಮೋರಿಯಲ್ ನ್ಯಾಷನಲ್ ಸರಕಾರಿ ಪ್ರಥಮ ದರ್ಜೆ ಕಾಲೇಜು, ಬಾರ್ಕೂರು - 576 210 (ಎನ್. ಸಿ. ಸಿ.)
3. ಯಜ್ಞಶ್ರೀ, ತೃತೀಯ ಬಿ.ಕಾಂ., ಶ್ರೀ ನಿರಂಜನ ಸ್ವಾಮಿ ಪ್ರಥಮ ದರ್ಜೆ ಕಾಲೇಜು, ಸುಂಕದಕಟ್ಟೆ, ಕೊಳಂಬೆ - 574 142 (ರಾಷ್ಟ್ರೀಯ ಸೇವಾ ಯೋಜನೆ)
4. ಶ್ರೀ ಅಮರ್ ಪರಶುರಾಮ್ ಚಾವನ್, ತೃತೀಯ ಬಿ.ಎಸ್ಸಿ., ಶ್ರೀ ಮಹಾವೀರ ಪ್ರಥಮ ದರ್ಜೆ ಕಾಲೇಜು, ಮೂಡಬಿದರೆ - 574 197 (ಕ್ರೀಡೆ).
5. ಕು. ಕ್ರಿಣೀತ ಜೈನ್ ಕೆ., ಪ್ರಥಮ ಎಂ.ಎಸ್ಸಿ. ರಸಾಯನಶಾಸ್ತ್ರ ವಿಭಾಗ, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು - 575 001 (ಸ್ನಾತಕೋತ್ತರ ಕೋರ್ಸ್)

<u>ಸಂತಾಪ ಸೂಚಕ ನಿರ್ಣಯ</u>

ಮಂಗಳೂರು ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿ (ಪ್ರಭಾರ) ಹುದ್ದೆಯಲ್ಲಿ ದಿನಾಂಕ 09.04.2015ರಿಂದ ಕರ್ತವ್ಯ ನಿರ್ವಹಿಸುತ್ತಿದ್ದ ಡಾ. ಪಿ. ಎ. ರೇಗೋ, ಪ್ರಾಧ್ಯಾಪಕರು, ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಇವರು ದಿನಾಂಕ 23.05.2016ರಂದು ಅಕಾಲ ನಿಧನರಾಗಿರುತ್ತಾರೆ.

ಮಂಗಳೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿಗೆ ಡೀನರ ನೆಲೆಯಲ್ಲಿ ಸದಸ್ಯರಾಗಿದ್ದ ಪ್ರೊ. ಕೆ. ಕೆ. ವಿಜಯಲಕ್ಷ್ಮಿ, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ ಇವರು ದಿನಾಂಕ 21.04.2016ರಂದು ಅಕಾಲ ನಿಧನರಾಗಿರುತ್ತಾರೆ.

ಇವರುಗಳು ತಮ್ಮ ಸೇವಾ ಅವಧಿಯಲ್ಲಿ ವಿಭಾಗದ ಅಧ್ಯಕ್ಷರು, ಶೈಕ್ಷಣಿಕ ಮಂಡಳಿ ಸದಸ್ಯತ್ವ, ವಿಶ್ವವಿದ್ಯಾನಿಲಯದ ವಿವಿಧ ಪ್ರಾಧಿಕಾರಗಳ ಸದಸ್ಯರಾಗಿ ವಿಶ್ವವಿದ್ಯಾನಿಲಯದ ಆಡಳಿತ ಮತ್ತು ಶೈಕ್ಷಣಿಕ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿರುತ್ತಾರೆ. ಇವರ ನಿಧನಕ್ಕೆ ಮಂಗಳೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿ ಮತ್ತು ಆಡಳಿತ ವರ್ಗವು ತನ್ನ ಸಂತಾಪವನ್ನು ವ್ಯಕ್ತಪಡಿಸುತ್ತಾ, ಅಗಲಿದ ದಿವ್ಯಾತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನು ನೀಡಲೆಂದೂ, ಹಾಗೂ ಇವರ ಅಗಲಿಕೆಯ ದುಃಖವನ್ನು ಸಹಿಸಿಕೊಳ್ಳುವ ಶಕ್ತಿಯನ್ನು ಕುಟುಂಬಸ್ಥರಿಗೆ ನೀಡಲಿ ಎಂದು ಕೋರುವ ಸಂತಾಪ ಸೂಚಕ ನಿರ್ಣಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಅಂಗೀಕರಿಸಿ ಶ್ರದ್ಧಾಂಜಲಿ ಅರ್ಪಿಸಲಾಯಿತು.

I ಘನತೆವೆತ್ತ ಕುಲಾಧಿಪತಿಯವರಿಂದ ಅನುಮೋದನೆ ಪಡಕೊಂಡ ಪರಿನಿಯಮಗಳು / ವಿನಿಯಮಗಳ ವಿವರ.

- ಸಭೆಯ ಗಮನಕ್ಕೆ ತರಲಾಯಿತು.

II 1) ದಿನಾಂಕ 26.03.2016 ರಂದು ನಡೆದ ಶೈಕ್ಷಣಿಕ ಮಂಡಳಿಯ 2015-16ನೇ ಸಾಲಿನ ನಾಲ್ಕನೆಯ ಸಾಮಾನ್ಯ ಸಭೆಯ ನಡಾವಳಿಗಳ ದೃಢೀಕರಣ.

2) ದಿನಾಂಕ 29.03.2016ರಂದು ನಡೆದ ಶೈಕ್ಷಣಿಕ ಮಂಡಳಿಯ 2015-16ನೇ ಸಾಲಿನ ತೃತೀಯ ವಿಶೇಷ ಸಭೆಯ ನಡಾವಳಿಗಳ (ಘಟಿಕೋತ್ಸವ) ದೃಢೀಕರಣ.

- ದೃಢೀಕರಿಸಲಾಯಿತು.

III ಕುಲಪತಿಗಳು, ಸಿಂಡಿಕೇಟು, ನಿಕಾಯಗಳು ಮತ್ತು ಅಧ್ಯಯನ ಮಂಡಳಿಗಳಿಂದ ಬಂದ ಪ್ರಸ್ತಾವನೆಗಳು:

ಕಾರ್ಯಸೂಚಿ ಸಂಖ್ಯೆ: ಡಿಇವಿ ಶೈ.ಮ.ಸಾಸ.1:1(2016-17)

ವಿಷಯ : ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ 'ಬ್ರಹ್ಮಶ್ರೀ ನಾರಾಯಣ ಗುರು ಅಧ್ಯಯನ ಪೀಠ' ಸ್ಥಾಪಿಸುವ ಬಗ್ಗೆ ರಚಿಸಿದ ಕರಡು ಪರಿನಿಯಮವನ್ನು ಅನುಮೋದಿಸುವ ಬಗ್ಗೆ.

ನಿರ್ಣಯ: ಕರಡು ಪರಿನಿಯಮವನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ ಶೈ.ಮ.ಸಾಸ.1:2(2016-17)

ವಿಷಯ : ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ 'ರಾಣಿ ಅಬ್ಬಕ್ಕ ಅಧ್ಯಯನ ಪೀಠ' ಸ್ಥಾಪನೆ ಬಗ್ಗೆ ರಚಿಸಿದ ಕರಡು ಪರಿನಿಯಮವನ್ನು ಅನುಮೋದಿಸುವ ಬಗ್ಗೆ.

ನಿರ್ಣಯ: ಸದರಿ ಪೀಠದ ಸಲಹಾ ಸಮಿತಿ ಸಭೆಯನ್ನು ವರ್ಷದಲ್ಲಿ ಎರಡು ಬಾರಿ ನಡೆಸುವಂತೆ ಪರಿನಿಯಮದಲ್ಲಿ ತಿದ್ದುಪಡಿ ಮಾಡಲು ಸೂಚಿಸಿ ಕರಡು ಪರಿನಿಯಮವನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ ಶೈ.ಮ.ಸಾಸ.1:3(2016-17)

ವಿಷಯ : ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ 'ಕೊಂಕಣಿ ಅಧ್ಯಯನ ಪೀಠ' ಸ್ಥಾಪನೆ ಬಗ್ಗೆ ರಚಿಸಿದ ಕರಡು ಪರಿನಿಯಮವನ್ನು ಅನುಮೋದಿಸುವ ಬಗ್ಗೆ.

ನಿರ್ಣಯ: ಸದರಿ ಪೀಠದ ಸಲಹಾ ಸಮಿತಿ ಸಭೆಯನ್ನು ವರ್ಷದಲ್ಲಿ ಎರಡು ಬಾರಿ ನಡೆಸುವಂತೆ ಪರಿನಿಯಮದಲ್ಲಿ ತಿದ್ದುಪಡಿ ಮಾಡಲು ಸೂಚಿಸಿ ಕರಡು ಪರಿನಿಯಮವನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಾರ್ವತ್ರಿಕ ಶೈ.ಮ.ಸಾಸ.1:4(2016-17)

ವಿಷಯ : ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕ್ರೀಡಾ ನೀತಿ ಅನುಷ್ಠಾನಗೊಳಿಸುವ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಾರ್ವತ್ರಿಕ ಶೈ.ಸಾ.ಸ.1:5(2016-17)

ವಿಷಯ : ದೈಹಿಕ ಶಿಕ್ಷಣ ವಿಭಾಗದ ಕ್ರೀಡಾ ಮಾರ್ಗದರ್ಶಿ (Sports Guidelines) ಯನ್ನು ತಯಾರಿಸುವ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು ಶೈ.ಸಾ.ಸ.1:6(2016-17)

ವಿಷಯ : ಶೈಕ್ಷಣಿಕ ಮಂಡಳಿ ಸಮಿತಿಯನ್ನು ರಚಿಸುವ ಬಗ್ಗೆ.

ನಿರ್ಣಯ: ಸಮಿತಿ ರಚಿಸುವ ಬಗ್ಗೆ ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಲಾಯಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ ಶೈ.ಸಾ.ಸ.1:7(2016-17)

ವಿಷಯ : ಭೂಗೋಳಶಾಸ್ತ್ರ ಪಿಹೆಚ್.ಡಿ. ಪದವಿಯ ಪಠ್ಯಕ್ರಮದ ಅನುಮೋದನೆ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿಶೈ.ಸಾ.ಸ.1:8(2016-17)

ವಿಷಯ : ಮಂಗಳೂರು ವಿಶ್ವವಿದ್ಯಾನಿಲಯದ ಎರಡು ವರ್ಷಗಳ (ನಾಲ್ಕು ಸೆಮಿಸ್ಟರುಗಳು) ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳಿಗೆ ಯುಜಿಸಿ ಮಾರ್ಗಸೂಚಿ ಪ್ರಕಾರ ಆಯ್ಕೆ ಆಧಾರಿತ ಶ್ರೇಯಾಂಕ ಪದ್ಧತಿಯಲ್ಲಿ ರಚಿಸಲಾದ ವಿನಿಯಮಗಳ ಬಗ್ಗೆ.

ನಿರ್ಣಯ: ವಿನಿಯಮವನ್ನು ಅನುಮೋದಿಸಲಾಯಿತು. ದಿನಾಂಕ 13.07.2016ರಂದು ನಡೆದ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಶಿಫಾರಸ್ಸುಗಳಲ್ಲಿ ಪ್ರಾಯೋಗಿಕ ವಿಷಯಗಳಿಗೆ ಎರಡು ಕ್ರೆಡಿಟ್‌ಗಳನ್ನು ನಿಗದಿಪಡಿಸುವ ಶಿಫಾರಸ್ಸನ್ನು ಅನುಮೋದಿಸಲಾಯಿತು. ಆದರೆ ಸೆಮಿನಾರ್ ಆಂತರಿಕ ಮೌಲ್ಯಮಾಪನದ ಒಂದು ಭಾಗವಾದುದರಿಂದ ಸೆಮಿನಾರ್‌ಗೆ ಒಂದು ಕ್ರೆಡಿಟ್‌ನ್ನು ನಿಗದಿಪಡಿಸುವ ಶಿಫಾರಸ್ಸನ್ನು ಕೈಬಿಡಲಾಯಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ ಶೈ.ಸಾ.ಸ.1:9(2016-17)

ವಿಷಯ : ಬಿ.ಕಾಂ. ಪದವಿ ಹಾಗೂ ಬಿ. ಕಾಂ. ಪದವಿಯ ಟ್ಯಾಕ್ಸ್ ಪ್ರೊಸೀಜರ್ ವೊಕೇಶನಲ್ ವಿಷಯದ ಕೆಲವೊಂದು ಪತ್ರಿಕೆಗಳ ಪಠ್ಯಕ್ರಮದಲ್ಲಿ ಮಾಡಲಾದ ಬದಲಾವಣೆಗಳಿಗೆ ಅನುಮೋದನೆ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಐವಿ ಶೈ.ಸಾ.ಸ.1:10(2016-17)

ವಿಷಯ : ಮಂಗಳೂರು ವಿಶ್ವವಿದ್ಯಾನಿಯಲದ ಸ್ನಾತಕೋತ್ತರ ಅನ್ವಯಿಕ ಪ್ರಾಣಿಶಾಸ್ತ್ರ ಪದವಿ ಪರೀಕ್ಷೆ (I-IV ಸೆಮಿಸ್ಟರ್‌ಗಳನ್ನು ಸೇರಿಸಿ) ಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿ/ನಿಗೆ ಚಿನ್ನದ ಪದಕ ನೀಡಲು ಪ್ರೊ. ಕೆ. ಕೆ. ವಿಜಯಲಕ್ಷ್ಮಿ ಮೆಮೋರಿಯಲ್ ಚಿನ್ನದ ಪದಕ ದತ್ತಿನಿಧಿ ಸ್ಥಾಪಿಸುವ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಐವಿ ಶೈ.ಸಾ.ಸ.1:11(2016-17)

ವಿಷಯ : ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ನೆಹರೂ ಚಿಂತನಾ ಕೇಂದ್ರ ಸ್ಥಾಪನೆ ಬಗ್ಗೆ ರಚಿಸಿದ ಕರಡು ಪರಿನಿಯಮವನ್ನು ಅನುಮೋದಿಸುವ ಬಗ್ಗೆ.

ನಿರ್ಣಯ: ಕರಡು ಪರಿನಿಯಮವನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು ಶೈ.ಸಾ.ಸ.1:12(2016-17)

ವಿಷಯ : ಡಾ. ಬಾಲಕೃಷ್ಣ ಕಲ್ಲೂರಾಯ, ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಹಾಗೂ ಶೈಕ್ಷಣಿಕ ಮಂಡಳಿ ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ.

ನಿರ್ಣಯ: ಅನುಮೋದಿಸಲಾಯಿತು. ಸಮ್ಮರ್ ಫೆಲೋಶಿಪ್‌ಗಾಗಿ ಸೂಕ್ತ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲು ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಡೀನರನ್ನು ಅಧ್ಯಕ್ಷರನ್ನಾಗಿ, ಡಾ. ಬಾಲಕೃಷ್ಣ ಕಲ್ಲೂರಾಯ ಇವರನ್ನು ಸಂಚಾಲಕರನ್ನಾಗಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗಗಳ ಅಧ್ಯಾಪಕರುಗಳನ್ನು ಸದಸ್ಯರನ್ನಾಗಿ ಒಳಗೊಂಡ ಸಮಿತಿಯನ್ನು ರಚಿಸಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಹವಿ ಶೈ.ಸಾ.ಸ.1:13(2016-17)

ವಿಷಯ : 2015-16ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ಅನುಮೋದನೆಯ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ ಶೈ.ಸಾ.ಸ.1.14 (2016-17)

ವಿಷಯ : ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅನ್ವಯಿಕ ಪ್ರಾಣಿಶಾಸ್ತ್ರ ಮತ್ತು ಅನ್ವಯಿಕ ಸಸ್ಯಶಾಸ್ತ್ರ ವಿಭಾಗಗಳಲ್ಲಿ ಶೈಕ್ಷಣಿಕ ವರ್ಷ 2016-17ನೇ ಸಾಲಿನಿಂದ ಕ್ರಮವಾಗಿ ಎಂ. ಎಸ್ಸಿ. ಪ್ರಾಣಿಶಾಸ್ತ್ರ ಮತ್ತು ಎಂ. ಎಸ್ಸಿ. ಸಸ್ಯಶಾಸ್ತ್ರ ಪದವಿಗಳನ್ನು ನಡೆಸುವ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು. ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡುವಂತೆ ಸಂಬಂಧಪಟ್ಟ ಅಧ್ಯಯನ ಮಂಡಳಿಯ ಅಧ್ಯಕ್ಷರಿಗೆ ಸೂಚಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ ಶೈ.ಸಾ.ಸ.1.15 (2016-17)

ವಿಷಯ : ಪಿ. ಜಿ. ಡಿಪ್ಲೋಮಾ ಇನ್ ಯೋಗಿಕ್ ಸೈನ್ಸ್‌ನ ಪ್ರವೇಶಾರ್ಹತೆ ತಿದ್ದುಪಡಿ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಎಸಿಸಿ ಶೈ.ಸಾ.ಸ.1.16 (2016-17)**

ವಿಷಯ : ಶೈಕ್ಷಣಿಕ ವರ್ಷ 2016-17ನೇ ಸಾಲಿನಿಂದ ಸಿಲಿಕಾನ್ ಕಾಲೇಜ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್, ಮಂಗಳೂರು ಎಂಬ ವಿದ್ಯಾಸಂಸ್ಥೆಯ ಸಂಯೋಜನೆ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಎಸಿಸಿ ಶೈ.ಸಾ.ಸ.1.17 (2016-17)**

ವಿಷಯ : ಶೈಕ್ಷಣಿಕ ವರ್ಷ 2016–17ನೇ ಸಾಲಿನಿಂದ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಡಿಸೈನ್, ಮಂಗಳೂರು ಎಂಬ ವಿದ್ಯಾಸಂಸ್ಥೆಯ ಸಂಯೋಜನೆ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಎಸಿಸಿ ಶೈ.ಸಾ.ಸ.1.18 (2016-17)**

ವಿಷಯ : ಶೈಕ್ಷಣಿಕ ವರ್ಷ 2016–17ನೇ ಸಾಲಿಗೆ ಮಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿ ಎಂಬ ವಿದ್ಯಾಸಂಸ್ಥೆಗೆ ಹೆಚ್ಚುವರಿ ವಿದ್ಯಾರ್ಥಿ ಪರಿಮಿತಿಗೆ ಅನುಮತಿ ನೀಡುವ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಎಸಿಸಿ ಶೈ.ಸಾ.ಸ.1.19 (2016-17)**

ವಿಷಯ : ಆಳ್ವಾಸ್ ಕಾಲೇಜ್ ಆಫ್ ಫಿಸಿಕಲ್ ಎಜ್ಯುಕೇಶನ್, ಮೂಡಬಿದಿರೆ ಎಂಬ ವಿದ್ಯಾ ಸಂಸ್ಥೆಗೆ ಶೈಕ್ಷಣಿಕ ವರ್ಷ 2016–17ನೇ ಸಾಲಿಗೆ ಎಂ.ಪಿ.ಎಡ್. ಕೋರ್ಸಿನ ಸಂಯೋಜನಾ ಬಗ್ಗೆ.

ನಿರ್ಣಯ: ಸ್ಥಳೀಯ ವಿಚಾರಣಾ ಸಮಿತಿಯ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ಸದರಿ ಸಮಿತಿಯು ವಿಧಿಸಿರುವ ಷರತ್ತುಗಳನ್ನು ಪೂರೈಸುವ ಷರತ್ತಿನ ಮೇರೆಗೆ ಶೈಕ್ಷಣಿಕ ವರ್ಷ 2016-17ನೇ ಸಾಲಿಗೆ ಶಿಫಾರಸ್ಸು ಮಾಡಿರುವ ವಿದ್ಯಾರ್ಥಿ ಪರಿಮಿತಿಯೊಂದಿಗೆ ಸಲ್ಲಿಸಿದ ವರದಿಯನ್ನು ಅಂಗೀಕರಿಸಿ ಸಂಯೋಜನೆ ನೀಡಬಹುದೆಂಬುದಾಗಿ ಸಿಂಡಿಕೇಟಿಗೆ ಶಿಫಾರಸ್ಸು ಮಾಡಲಾಯಿತು.

**ಕಾರ್ಯಸೂಚಿ ಸಂಖ್ಯೆ: ಎಸಿಸಿ ಶೈ.ಸಾ.ಸ.1.20 (2016-17)**

ವಿಷಯ : ಆಳ್ವಾಸ್ ಕಾಲೇಜ್ ಆಫ್ ಎಜ್ಯುಕೇಶನ್, ಮೂಡಬಿದಿರೆ ಎಂಬ ವಿದ್ಯಾ ಸಂಸ್ಥೆಗೆ ಶೈಕ್ಷಣಿಕ ವರ್ಷ 2016–17ನೇ ಸಾಲಿಗೆ ಎಂ.ಎಡ್. ಕೋರ್ಸಿಗೆ ವಿಸ್ತರಣಾ ಸಂಯೋಜನಾ ಮಂಜೂರಾತಿ ಬಗ್ಗೆ.

ನಿರ್ಣಯ: ಸ್ಥಳೀಯ ವಿಚಾರಣಾ ಸಮಿತಿಯ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ಸದರಿ ಸಮಿತಿಯು ವಿಧಿಸಿರುವ ಷರತ್ತುಗಳನ್ನು ಪೂರೈಸುವ ಷರತ್ತಿನ ಮೇರೆಗೆ ಶೈಕ್ಷಣಿಕ ವರ್ಷ 2016-17ನೇ ಸಾಲಿಗೆ ಶಿಫಾರಸ್ಸು ಮಾಡಿರುವ ವಿದ್ಯಾರ್ಥಿ ಪರಿಮಿತಿಯೊಂದಿಗೆ ಸಲ್ಲಿಸಿದ ವರದಿಯನ್ನು ಅಂಗೀಕರಿಸಿ ವಿಸ್ತರಣಾ ಸಂಯೋಜನೆ ನೀಡಬಹುದೆಂಬುದಾಗಿ ಸಿಂಡಿಕೇಟಿಗೆ ಶಿಫಾರಸ್ಸು ಮಾಡಲಾಯಿತು.

**ಕಾರ್ಯಸೂಚಿ ಸಂಖ್ಯೆ: ಎಸಿಸಿ ಶೈ.ಸಾ.ಸ.1.21 (2016-17)**

ವಿಷಯ : ಸರಕಾರಿ ಪ್ರಥಮ ದರ್ಜೆ ಕಾಲೇಜು, ಬೆಳ್ತಂಗಡಿ ಎಂಬ ವಿದ್ಯಾ ಸಂಸ್ಥೆಗೆ ಶೈಕ್ಷಣಿಕ ವರ್ಷ 2016–17ನೇ ಸಾಲಿಗೆ ವಿಸ್ತರಣಾ ಸಂಯೋಜನಾ ಮಂಜೂರಾತಿ ಬಗ್ಗೆ.

ನಿರ್ಣಯ: ಸ್ಥಳೀಯ ವಿಚಾರಣಾ ಸಮಿತಿಯ ವರದಿಯಲ್ಲಿ ಎಂ.ಎ. ಕನ್ನಡ ಕೋರ್ಸಿಗೆ ಮಾತ್ರ ಶಿಫಾರಸ್ಸು ಮಾಡಿದ್ದು, ಎಂ.ಎ. ರಾಜ್ಯಶಾಸ್ತ್ರ ಕೋರ್ಸಿಗೆ ಶಿಫಾರಸ್ಸು ಮಾಡಿರದ ಕಾರಣ ಈ ಬಗ್ಗೆ ಸರಕಾರಿ ಆದೇಶವು ಸ್ವೀಕೃತಿಯಾಗಿರುವ ಹಿನ್ನೆಲೆಯಲ್ಲಿ ಸಂಸ್ಥೆಗೆ ಕಲಾ ನಿಕಾಯದ ಡೀನರು ಹಾಗೂ ರಾಜ್ಯಶಾಸ್ತ್ರದ ಪ್ರಾಧ್ಯಾಪಕರನ್ನೊಳಗೊಂಡ ಸಮಿತಿಯನ್ನು ಮರುಪರಿಶೀಲನೆ ನಡೆಸಲು ಕಳುಹಿಸಿ ಸಲ್ಲಿಸುವ ವರದಿಯ ಆಧಾರದ ಮೇರೆಗೆ ವಿಸ್ತರಣಾ ಸಂಯೋಜನೆ ನೀಡಬಹುದೆಂಬುದಾಗಿ ಸಿಂಡಿಕೇಟಿಗೆ ಶಿಫಾರಸ್ಸು ಮಾಡಲಾಯಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ ಶೈ.ಸಾ.ಸ.1.22 (2016-17)

ವಿಷಯ : ಸರಕಾರಿ ಪ್ರಥಮ ದರ್ಜೆ ಕಾಲೇಜು, ಮುನಿಯಾಲು, ಕಾರ್ಕಳ ಎಂಬ ವಿದ್ಯಾ ಸಂಸ್ಥೆಗೆ ಶೈಕ್ಷಣಿಕ ವರ್ಷ 2016–17ನೇ ಸಾಲಿಗೆ ವಿಸ್ತರಣಾ ಸಂಯೋಜನಾ ಮಂಜೂರಾತಿ ಬಗ್ಗೆ.

ನಿರ್ಣಯ: ಸ್ಥಳೀಯ ವಿಚಾರಣಾ ಸಮಿತಿಯ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ಸದರಿ ಸಮಿತಿಯು ವಿಧಿಸಿರುವ ಷರತ್ತುಗಳನ್ನು ಪೂರೈಸುವ ಷರತ್ತಿನ ಮೇರೆಗೆ ಶೈಕ್ಷಣಿಕ ವರ್ಷ 2016-17ನೇ ಸಾಲಿಗೆ ಶಿಫಾರಸ್ಸು ಮಾಡಿರುವ ವಿದ್ಯಾರ್ಥಿ ಪರಿಮಿತಿಯೊಂದಿಗೆ ಸಲ್ಲಿಸಿದ ವರದಿಯನ್ನು ಅಂಗೀಕರಿಸಿ ವಿಸ್ತರಣಾ ಸಂಯೋಜನೆ ನೀಡಬಹುದೆಂಬುದಾಗಿ ಸಿಂಡಿಕೇಟಿಗೆ ಶಿಫಾರಸ್ಸು ಮಾಡಲಾಯಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ ಶೈ.ಸಾ.ಸ.1.23 (2016-17)

ವಿಷಯ : ಗೌರವ ಡಾಕ್ಟರೇಟ್ ಪದವಿ ಪ್ರದಾನಕ್ಕೆ ಸಂಬಂಧಿಸಿದಂತೆ ಪರಿನಿಯಮದ ತಿದ್ದುಪಡಿ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ ಶೈ.ಸಾ.ಸ.1.24 (2016-17)

ವಿಷಯ : ಎರಡು ವರ್ಷಗಳ ಬಿ. ಇಡಿ. ಪದವಿಯ ದ್ವಿತೀಯ ಸೆಮಿಸ್ಟರಿನ ಪರಿಷ್ಕೃತ ಪಠ್ಯಕ್ರಮದ ಅನುಮೋದನೆ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ ಶೈ.ಸಾ.ಸ.1.25 (2016-17)

ವಿಷಯ : ಶಿಕ್ಷಣ ನಿಕಾಯದಡಿ ಬರುವ ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳಿಗೆ ಯುಜಿಸಿ ಮಾರ್ಗಸೂಚಿ ಆಧಾರಿತ ಆಯ್ಕೆ ಆಧಾರಿತ ಶ್ರೇಯಾಂಕ ಪದ್ಧತಿಯ ವಿನಿಯಮದ ಪ್ರಕಾರ ಪರಿಷ್ಕರಿಸಲಾದ ಪಠ್ಯಕ್ರಮಗಳ ಅನುಮೋದನೆ ಬಗ್ಗೆ.

ನಿರ್ಣಯ: ಶಿಕ್ಷಣ ನಿಕಾಯದಡಿ ಬರುವ ಸ್ನಾತಕೋತ್ತರ ಕಾರ್ಯಕ್ರಮಗಳ ಪಠ್ಯಕ್ರಮಗಳನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ ಶೈ.ಸಾ.ಸ.1.26 (2016-17)

ವಿಷಯ : ವಾಣಿಜ್ಯ ನಿಕಾಯದಡಿ ಬರುವ ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳಿಗೆ ಯುಜಿಸಿ ಮಾರ್ಗಸೂಚಿ ಆಧಾರಿತ ಆಯ್ಕೆ ಆಧಾರಿತ ಶ್ರೇಯಾಂಕ ಪದ್ಧತಿಯ ವಿನಿಯಮದ ಪ್ರಕಾರ ಪರಿಷ್ಕರಿಸಲಾದ ಪಠ್ಯಕ್ರಮಗಳ ಅನುಮೋದನೆ ಬಗ್ಗೆ.

ನಿರ್ಣಯ: ವಾಣಿಜ್ಯ ನಿಕಾಯದಡಿ ಬರುವ ಸ್ನಾತಕೋತ್ತರ ಕಾರ್ಯಕ್ರಮಗಳ ಪಠ್ಯಕ್ರಮಗಳನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ ಶೈ.ಸಾ.ಸ.1.27 (2016-17)

ವಿಷಯ : ರೇಡಿಯೋ ಥೆರಪಿ ಟೆಕ್ನಾಲಜಿ ಡಿಪ್ಲೋಮಾ ಕಾರ್ಯಕ್ರಮವನ್ನು ನಿಯಂತ್ರಿಸುವ ವಿನಿಯಮದ ಅನುಮೋದನೆ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ ಶೈ.ಸಾ.ಸ.1.28 (2016-17)

ವಿಷಯ : ಎಂ. ಎ. ಕೊಂಕಣಿ ಪದವಿಗೆ ನಿಗದಿಪಡಿಸಿದ ಪ್ರವೇಶಾರ್ಹತೆ ಮತ್ತು ಪಠ್ಯಕ್ರಮದ ಅನುಮೋದನೆ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ ಶೈ.ಸಾ.ಸ.1.29 (2016-17)

ವಿಷಯ : ಕಲಾ ನಿಕಾಯದ ವ್ಯಾಪ್ತಿಯಡಿ ಬರುವ ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳಿಗೆ ಯುಜಿಸಿ ಮಾರ್ಗಸೂಚಿ ಆಧಾರಿತ ಆಯ್ಕೆ ಆಧಾರಿತ ಶ್ರೇಯಾಂಕ ಪದ್ಧತಿಯ ವಿನಿಯಮದ ಪ್ರಕಾರ ಪರಿಷ್ಕರಿಸಲಾದ ಪಠ್ಯಕ್ರಮಗಳ ಅನುಮೋದನೆ ಬಗ್ಗೆ.

ನಿರ್ಣಯ: ಕಲಾ ನಿಕಾಯದಡಿ ಬರುವ ಸ್ನಾತಕೋತ್ತರ ಕಾರ್ಯಕ್ರಮಗಳ ಪಠ್ಯಕ್ರಮಗಳನ್ನು ಅನುಮೋದಿಸಲಾಯಿತು. ಎಂ.ಎಸ್.ಡಬ್ಲ್ಯು. ಪಠ್ಯ ಕ್ರಮಕ್ಕೆ ಸಂಬಂಧಿಸಿದಂತೆ ಶೈಕ್ಷಣಿಕ ಮಂಡಳಿ ಸದಸ್ಯರೊಬ್ಬರು ನೀಡಿರುವ ಸಲಹೆಯನ್ನು ಕಲಾ ನಿಕಾಯದ ಡೀನರೊಂದಿಗೆ ಚರ್ಚಿಸಿ ಅಗತ್ಯವಿರುವ ಕ್ರಮವನ್ನು ಕೈಗೊಳ್ಳಲು ಅಧ್ಯಯನ ಮಂಡಳಿಯ ಅಧ್ಯಕ್ಷರಿಗೆ ಸೂಚಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಎಸಿಸಿ ಶೈ.ಸಾ.ಸ.1.30 (2016-17)**

ವಿಷಯ : ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ವ್ಯಾಪ್ತಿಯಡಿ ಬರುವ ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳಿಗೆ ಯುಜಿಸಿ ಮಾರ್ಗಸೂಚಿ ಆಧಾರಿತ ಆಯ್ಕೆ ಆಧಾರಿತ ಶ್ರೇಯಾಂಕ ಪದ್ಧತಿಯ ವಿನಿಯಮದ ಪ್ರಕಾರ ಪರಿಷ್ಕರಿಸಲಾದ ಪಠ್ಯಕ್ರಮಗಳ ಅನುಮೋದನೆ ಬಗ್ಗೆ.

ನಿರ್ಣಯ: ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದಡಿ ಬರುವ ಸ್ನಾತಕೋತ್ತರ ಕಾರ್ಯಕ್ರಮಗಳ ಪಠ್ಯಕ್ರಮಗಳನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಎಸಿಸಿ ಶೈ.ಸಾ.ಸ.1.31 (2016-17)**

ವಿಷಯ: ಸೈಬರ್ ಸೆಕ್ಯೂರಿಟಿ ಸ್ನಾತಕೋತ್ತರ ಡಿಪ್ಲೋಮಾ ಕಾರ್ಯಕ್ರಮವನ್ನು ನಿಯಂತ್ರಿಸುವ ವಿನಿಯಮ ಮತ್ತು ಪಠ್ಯಕ್ರಮದ ರೂಪುರೇಷೆಯ ಅನುಮೋದನೆ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

ಮಾನ್ಯ ಕುಲಪತಿಯವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಕುಲಸಚಿವರು

ಕುಲಪತಿಗಳು